ಗಮನ ಸೆಳೆಯುವ ಸೂಚನೆ

ಶ್ರೀ ಬಿ. ಲಕ್ಕಪ್ಪ — ಅವರು ಸಭೆಯಲ್ಲಿ ಹಾಜರಿರಲಿಲ್ಲ.

ಮಂಟಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎ ಎನ್.ಎಂ. ಆಗಿದ್ದ ಕೆ.ಬಿ, ಭಾಗೀರತಿ ಅವರ ಸಾವಿನ ಬಗ್ಗೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್.— ಬಸವಕಲ್ಯಾಣ ತಾಲ್ಲೂಕಿನ ಮಂಟಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎ.ಎನ್.ಎಂ. ಆಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ಕೆ.ಬಿ. ಭಾಗೀರತಿ ಎಂಬುವರ ಸಾವಿನ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಈ ಸಾವು ಹೇಗೆ ಆಯಿತು ಎಂಬುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಹೇಳಬೇಕು. ಆ ಬಗ್ಗೆ ಅವರು ಹೇಳಿಕೆಯನ್ನು ತಯಾರು ಮಾಡಿ ಇಟ್ಟುಕೊಂಡಿದ್ದಾರೆಂದು ನನಗನ್ನಿಸುತ್ತದೆ.

ಶ್ರೀ ಬಿ. ರಾಚಯ್ಯ.— ಅದು ಇನ್ನೂ ತಯಾರಾಗಿಲ್ಲ. ನಾಳೆ ಅದರ ಬಗ್ಗೆ ಉತ್ತರವನ್ನು ಓದಿಗಿಸಿಕೊಡುತ್ತೇನೆ.

ಅಧ್ಯಕ್ಷರು.— ನಿಮಗೆ ಸಮಯ ಬೇಕೇ.

ಶ್ರೀ ಆರ್.ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೆ, ಅದರ ಅವಶ್ಯಕತೆ ಇಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರು ನನಗೊಂದು ಪತ್ರ ಬರೆದು ಇದನ್ನು ಸಿ.ಓ.ಡಿ. ಗೆ ರೆಫರ್ ಮಾಡಬೇಕು. ಪ್ರಾಪರ್ ಇನ್ವೆಸ್ಟಿಗೇಷನ್ ಆಗಬೇಕೆಂದು ಕೇಳಿಕೊಂಡಿದ್ದಾರೆ. ಅದನ್ನು ನಾನು ಈಗಾಗಲೇ ಸಿ.ಓ.ಡಿ.ಗೆ ರೆಫರ್ ಮಾಡಿದ್ದೇನೆ.

ಶ್ರೀ ಬಿ. ರಾಚಯ್ಯ.— ಒಳ್ಳೆಯ ಕೆಲಸ ಮಾಡಿದ್ದೀರಿ.

ಶ್ರೀ ವೇದಾಂತ ಹೆಬ್ಬಾರ್.— ಮಾನ್ಯ ಅಧ್ಯಕ್ಷರೆ, ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಕಳೆದ ಐದು ವರ್ಷಗಳಿಂದ ನಷ್ಟವಾಗುತ್ತಿರುವ ಬಗ್ಗೆ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಹಾಗೂ ವಿದ್ಯುತ್ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ.— ಇದನ್ನು ನಂತರ ತೆಗೆದುಕೊಳ್ಳಿ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು.— ನಂತರ ಇದನ್ನು ತೆಗೆದುಕೊಳ್ಳಲಾಗುವುದು.

ನಿಯಂಮ ೩೩೪ರ ವೇರೆಗೆ

ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ ಅವರು ಸಭೆಯಲ್ಲಿ ಹಾಜರಿರಲಿಲ್ಲ.

ಶ್ರೀ ಕೆ. ಜಿ. ರಾಮಸ್ವಾಮಿ ಅವರು ಸಭೆಯಲ್ಲಿ ಹಾಜರಿರಲಿಲ್ಲ.

1 ತರೀಕೆರೆ ತಾಲ್ಲೂಕಿನ ಬೆಟ್ಟದ ಹಳ್ಳಿ ಬಸವನ ಹಳ್ಳಿ ಕೆರೆ ನಿರ್ಮಾಣದ ಬಗ್ಗೆ.

ಶ್ರೀ ಬಿ.ಆರ್. ನೀಲಕಂಠಪ್ಪ.— ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು, ಬೆಟ್ಟದಹಳ್ಳಿ ಬಸವನಹಳ್ಳಿ ಕೆರೆ ನಿರ್ಮಾಣಕ್ಕಾಗಿ ೧೯೮೭-೮೮ನೇ ಸಾಲಿನಲ್ಲಿ ಸುಮಾರು ೧೪ ಲಕ್ಷ ರೂ. ಗಳನ್ನು ಕರ್ನಾಟಕ ಸರ್ಕಾರದ ಆಯುವ್ಯಯದಲ್ಲಿ ಸೇರಿಸಿ ಈಗ ಈ ಕೆರೆ ನಿರ್ಮಾಣವನ್ನು ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿಗೆ ವರ್ಗಾಯಿಸಿದ್ದಾರೆ. ಕಾರಣ ತಿಳಿಸಿ. ಮತ್ತು ಕೇವಲ ಕೆರೆ ನಿರ್ಮಾಣದ ಕಾರ್ಯವನ್ನು ಮಾತ್ರ ವರ್ಗಾಯಿಸಿ ಆಯವ್ಯಯದಲ್ಲಿ ಮಂಜೂರಾದ ಹಣವನ್ನು ವರ್ಗಾಯಿಸದೆ ಇರುವುದರಿಂದ ಈ ಕೆರೆ ನಿರ್ಮಾಣ ಸ್ಥಗಿತಗೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಆದ್ದರಿಂದ ದಯಮಾಡಿ ಕೆಲಸದ ವರ್ಗಾವಣೆಯೊಂದಿಗೆ ಹಣದ ವರ್ಗಾವಣೆಯನ್ನೂ ಮಾಡಿದ್ದೀರಾ? ಅಥವಾ ಈ ಕಾರ್ಯ